ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕನ್ನಡ ಬೆರಳಚ್ಚುಗಾರರ ಹುದ್ದೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಖಾಲಿ ಇರುವ ಹುದ್ದೆಗಳೆಷ್ಟು? ಇಲಾಖಾವಾರು ಮಾಹಿತಿ ನೀಡುವುದು)

ಆ) ಬಂದಿದ್ದಲ್ಲಿ ಇಲ್ಲಿಯವರೆಗೂ ಖಾಲಿ ಇರುವ ಹುದ್ದೆಗಳನ್ನು ತುಂಬದೇ ಇರಲು ಕಾರಣವೇನು?

ಇ) ಈಗಲಾದರೂ, ಈ ಹುದ್ದೆಗಳನ್ನು ತುಂಬುವ ಉದ್ದೇಶವಿದೆಯೇ ಹಾಗೂ ಈ ಹುದ್ದೆಗಳನ್ನು ಭರ್ತಿ ಮಾಡಲು ಬೇಕಾಗುವ ಸಮಯವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ 42 ಬೆರಳಚ್ಚುಗಾರರ ಹುದ್ದೆಗಳು ಖಾಲಿ ಇರುವುವು (ಇಲಾಖಾವಾರು ಮಾಹಿತಿ ಲಗತ್ತಿಸಿದೆ)

ಆ) ಆಯ್ಕೆ ಸಮಿತಿ ಶಿಫಾರಸ್ಸು ಮಾಡಿದ 124 ಬೆರಳಚ್ಚುಗಾರರಿಗೂ ನೇಮಕಾತಿ ಆದೇಶ ನೀಡಿದ್ದು, 92 ಬೆರಳಚ್ಚುಗಾರರು ವರದಿ ಮಾಡಿಕೊಂಡಿದ್ದಾರೆ. ನೇಮಕಾತಿ ಆದೇಶ ನೀಡಿದ ಪ್ರಕಾರ ಎಲ್ಲರೂ ವರದಿ ಮಾಡಿಕೊಂಡಿದ್ದರೆ ಖಾಲಿ ಇರುವ ಹುದ್ದೆಗಳು ಕಡಿಮೆಯಾಗುತ್ತಿದ್ದವು. ಪುನಃ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಾಧಿಕಾರವನ್ನು ರಚಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಸೂಕ್ತ ಸಮಯದಲ್ಲಿ ಹುದ್ದೆಗಳನ್ನು ತುಂಬುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

**ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಬೆರಳಚ್ಚುಗಾರರ ಹುದ್ದೆಗಳು ಖಾಲಿ ಇರುವ ಬಗ್ಗೆ ಇಲಾಖಾವಾರು ಮಾಹಿತಿ.**

| | |
|---|---|
| 1) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 09 |
| 2) ಲೋಕೋಪಯೋಗಿ ಇಲಾಖೆ | 01 |
| 3) ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ | 06 |
| 4) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 03 |
| 5) ಆರ್ಥಿಕ ಇಲಾಖೆ | 01 |
| 6) ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ | 07 |
| 7) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ | 01 |
| 8) ಪಸುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆ | 02 |
| 9) ಸಹಕಾರ ಇಲಾಖೆ | 02 |
| 10) ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ | 02 |
| 11) ಶಿಕ್ಷಣ ಇಲಾಖೆ | 02 |
| 12) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 06 |
| **ಒಟ್ಟು** | **42** |

**ರಾಜ್ಯ ಲಾಟರಿಯಿಂದ ಬಂದ ಆದಾಯ**

65 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಉಳಿತಾಯ ರಾಜ್ಯ ಲಾಟರಿ ಮತ್ತು ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ನಡೆಸುತ್ತಿರುವ ಕರ್ನಾಟಕ ರಾಜ್ಯ ಲಾಟರಿಯಿಂದ 1989-90 1990-91, 1991-92 ನೇ ಸಾಲಿನಲ್ಲಿ ರಾಜ್ಯ ಸರ್ಕಾರಕ್ಕೆ ಬಂದ ಆದಾಯವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಲಾಟರಿ ಟಿಕೇಟುಗಳು ಸಹ ಅಧಿಕೃತವಲ್ಲದ ಟಿಕೇಟುಗಳನ್ನು ಮಾರಾಟ ಮಾಡಿ ಜನರಿಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇವೆಲ್ಲವನ್ನೂ ಅರಿತೂ ಸಹ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದೇ ಇರಲು ಕಾರಣವೇನು?

ಈ) ಲಾಟರಿ ದೊರೆತ ಎಷ್ಟು ಜನರು ಹಣವನ್ನು ತೆಗೆದುಕೊಳ್ಳದೇ ಇರುವುದರಿಂದ ಸರ್ಕಾರಕ್ಕೆ ಎಷ್ಟು ಹಣ ಉಳಿತಾಯವಾಗಿರುವುದು.

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು)

ಅ) 1989-90 ರೂ. 3.91 ಕೋಟಿ
1990-91 ರೂ. 3.51 ಕೋಟಿ
1991-92 ರೂ. 2.32 ಕೋಟಿ
(ಡಿಸೆಂಬರ್ 91ರ ಅಂತ್ಯದವರೆಗೆ)

ಜಿಲ್ಲಾವಾರು ಅಂಕಿಗಳು ದೊರಕುವುದಿಲ್ಲ. ಅಧಿಕೃತವಲ್ಲದ ಲಾಟರಿ ಟಿಕೇಟ್ ಮಾರಾಟ ಮಾಡಿರುವ ಒಂದೇ ಒಂದು ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈಗಾಗಲೇ ಈ ಪ್ರಕರಣದಲ್ಲಿ ಪೊಲೀಸಿನವರು ಅಪರಾಧಿಯನ್ನು ಬಂಧಿಸಿ ಬೆಂಗಳೂರಿನ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ರವರ ಮುಂದೆ ಹಾಜರುಪಡಿಸಿರುತ್ತಾರೆ. ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಆದೇಶ ನೀಡಲಾಗಿದೆ.

ಈ)

1989-90 : ರೂ. 95 ಲಕ್ಷ
1990-91 : ರೂ. 85 ಲಕ್ಷ
1991-92 : ರೂ. 65.94 ಲಕ್ಷ
(31-12-91ರವರೆಗೆ)

**ರಾಜ್ಯ ಹೈಕೋರ್ಟಿನಲ್ಲಿ ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ**

67 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೈಕೋರ್ಟಿನಲ್ಲಿ ಎಷ್ಟು ನ್ಯಾಯಾಧೀಶರಿರುವರು ಹಾಗೂ ಎಷ್ಟು ನ್ಯಾಯಾಧೀಶರ ಹುದ್ದೆಗಳು ಖಾಲಿ ಇರುವುವು?

ಆ) ರಾಜ್ಯದ ಹೈಕೋರ್ಟಿನಲ್ಲಿರುವ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಯಾವ ಕ್ರಮಕೈಕೊಂಡಿರುವರು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಒಟ್ಟು 30 ಹುದ್ದೆಗಳು ಇವೆ. (ಎರಡು ಅಪರ ನ್ಯಾಯಮೂರ್ತಿಗಳ ಹುದ್ದೆಗಳು ಸೇರಿದಂತೆ) ಅದರಲ್ಲಿ 4 ನ್ಯಾಯಾಧೀಶರ ಮತ್ತು ಎರಡು ಅಪರ ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ.